## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಬಂಟ್ವಾಳ, ದ.ಕ. ಇವರ ನ್ಯಾಯಾಲಯದಲ್ಲಿ

**ಸಿ.ಸಿ.ನಂ. 646/2012**

ಸಿ ಡಬ್ಲ್ಯೂಃ 29

ಪಿ ಡಬ್ಲ್ಯೂಃ 18

| | | |
|---|---|---|
| ಹೆಸರು | ಃ | ಅನಿಲ್ ಎಸ್ ಕುಲಕರ್ಣಿ |
| ತಂದೆಯ ಹೆಸರು | ಃ | ಶ್ಯಾಮರಾವ್ ಕುಲಕರ್ಣಿ |
| ಪ್ರಾಯ | ಃ | 64 ವರ್ಷ |
| ಉದ್ಯೋಗ | ಃ | ನಿವೃತ್ತ ಪೋಲಿಸ್ ಇನ್ಸಪೆಕ್ಟರ್ |
| ವಾಸ | ಃ | ಧಾರವಾಡ |

ದಿಃ 25.04.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2011 ಆಗಸ್ಟ ನಿಂದ 2013 ಸಪ್ಟಂಬರ್ ವರೆಗೆ ಬಂಟ್ವಾಳ ವೃತ್ತ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿ. 21.12.2011 ರಂದು ಚಾಸಾ-25 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ದಿ. 22.12.2011 ರಂದು ಪಿರ್ಯಾಧಿದಾರರು ತೋರಿಸಿಕೊಟ್ಟಂತೆ ಕೃತ್ಯ ಸ್ಥಳದ ಪಂಚನಾಮೆಯನ್ನು ನಿಪಿ-2 ರಂತೆ ಜರುಗಿಸಿರುತ್ತೇನೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಆ ಸಮಯ ಸ್ಥಳದ ಕಚ್ಚಾ ನಕಾಶೆಯನ್ನು ಸಹ ತಯಾರಿಸಿರುತ್ತೇನೆ. ನಕಾಶೆಯನ್ನು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ದಿ. 24.12.2011 ರಂದು ಸಿಬ್ಬಂದಿಗಳಾದ ಚಾಸಾ-21 ಮತ್ತು 22 ರವರು ಒಂದು ಮಂಗಳ ಸೂತ್ರದ ಕರಿಮಣಿ ಸರಿದ ತುಂಡನ್ನು ಮತ್ತು ಒಂದು ಚಿನ್ನದ ಸರವನ್ನು ಹಾಜರುಪಡಿಸಿದ್ದನ್ನು ಪಂಚನಾಮೆ ಮೂಲಕ ವಶಕ್ಕೆ ಪಡೆದುಕೊಂಡಿರುತ್ತೇನೆ.

ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿ ತಯಾರಿಸಿ ನಿವೇದಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆ ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎಫ್) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ಮತ್ತು 2 ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ. 29.12.2011 ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ಮೇಲೆ ಹೇಳಿದ ಸ್ವತ್ತುಗಳನ್ನು ಅರ್ಜಿದಾರರ ವಶಕ್ಕೆ ರಶೀದಿ ಮುಖೇನ ಬಿಟ್ಟುಕೊಟ್ಟಿರುತ್ತೇನೆ. ರಶೀದಿಯನ್ನು ನಿಪಿ-22 ಎಂದು, ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ನಿಪಿ-4ರ ಪೋಟೋದಲ್ಲಿ ಕಾಣುವ ಕರಿಮಣಿ ಸರ ಮತ್ತು ಚಿನ್ನದ ಸರವನ್ನು ಸಾಕ್ಷಿ ನೋಡಿ ಗುರುತಿಸಿದರು.

3. ದಿ. 18.05.2012 ರಂದು ಚಾಸಾ-27 ರವರು ವಿಟ್ಲ ಠಾಣಾ ಅಕ್ರ ಸಂಖ್ಯೆ 89/2012 ರ ತನಿಖೆಯಲ್ಲಿರುವಾಗ ಆರೋಪಿ ದಿನೇಶ್ ಪೂಜಾರಿ ಮತ್ತು ಮೋಟಾರು ಸೈಕಲ್ ಕೆಎ-21-ಎಲ್-9699 ಮತ್ತು 24 ಗ್ರಾಂ ಚಿನ್ನದ ಕರಿಮಣಿ ಸರ, ಮಹಜರಗಳನ್ನು ವರದಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ವಿಟ್ಲ ಠಾಣಾ ಸಕ್ರ ಸಂಖ್ಯೆ 89/2012 ರಲ್ಲಿ ಸದರಿ ದಿನೇಶ್ ಪೂಜಾರಿ ರವರ ಸ್ವ ಖುಷಿ ಹೇಳಿಕೆಯನ್ನು ನಾನು ಪಡೆದುಕೊಂಡಿರುತ್ತೇನೆ. ನಗರ ಠಾಣಾ ಅಕ್ರ ಸಂಖ್ಯೆ 242/2011 ರಲ್ಲಿ ಸದರಿ ಆರೋಪಿ ಮತ್ತು ಇನ್ನೊಬ್ಬ ಆರೋಪಿಯು ಭಾಗಿಯಾಗಿರುತ್ತಾನೆ ಎಂದು ಗೊತ್ತಾಯಿತು. ಅಕ್ರ ಸಂಖ್ಯೆ 242/2011 ರಲ್ಲಿ ಆರೋಪಿ ದಿನೇಶ ಪೂಜಾರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

4. ದಿ. 19.05.2012 ರಂದು ಚಾಸಾ-28 ರವರು ಮಹಜರ ಜರುಗಿಸಿ ವಶಕ್ಕೆ ಪಡೆದುಕೊಂಡ ಕೆಎ-19-8097 ಬೈಕನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಬೈಕ ಮೇಲೆ ನಾನು ಸ್ವತ್ತು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-10 ಮತ್ತು 11

ರವರ ಹೇಳಿಕೆಗಳನ್ನು ಕ್ರಮವಾಗಿ ನಿಪಿ-16 ಮತ್ತು 15 ರಂತೆ ಪಡೆದುಕೊಂಡಿರುತ್ತೇನೆ. ಆರೋಪಿತರ ಗುರುತು ಹಚ್ಚುವ ಕವಾಯತು ಪ್ರಕ್ರಿಯೇಯನ್ನು ತಾಲೂಕು ದಂಡಾಧಿಕಾರಿವರು ಕೈಗೊಂಡಿರುತ್ತಾರೆ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತಾರೆ.

5. ದಿ. 29.06.2012 ರಂದು ಡಿ ಸಿ ಐ ಬಿ ಮಂಗಳೂರು ಸಿಬ್ಬಂದಿ ಚಾಸಾ-20 ಸಂಜೀವ ಪುರುಷ ರವರು 2ನೇ ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆತನ ಸ್ವ ಖುಷಿ ಹೇಳಿಕೆಯನ್ನು ಸಹ ನಾನು ಪಡೆದುಕೊಂಡಿರುತ್ತೇನೆ. 2ನೇ ಆರೋಪಿಯು ಸ್ವ ಖುಷಿ ಹೇಳಿಕೆಯಲ್ಲಿ ತಾನು ಮತ್ತು ದಿನೇಶ್ ಸೇರಿಕೊಂಡು ಕೃತ ನಡೆಸಿದ ಜಾಗವನ್ನು ನನ್ನ ಜೊತೆ ಬಂದರೆ ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಸದರಿ ಸ್ವ ಖುಷಿ ಹೇಳಿಕೆಯಲ್ಲಿನ ಭಾಗವನ್ನು ನಿಪಿ-23 ಎಂದು ಗುರುತಿಸಲಾಯಿತು . ಅದರಂತೆ ಕೃತ್ಯ ಸ್ಥಳವಾದ ಕುಳ ಗ್ರಾಮದ ಕುಂತುಟ್ಟು ಎಂಬಲ್ಲಿಗೆ 2 ನೇ ಆರೋಪಿಯು ತೋರಿಸಿಕೊಟ್ಟ ಜಾಗಕ್ಕೆ ಬೇಟಿ ಕೊಟ್ಟು ಪಂಚರ ಸಮಕ್ಷಮ ನಿಪಿ-9 ರಂತೆ ಮಹಜರ ಜರುಗಿಸಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ದಿ. 29.06.2012 ರಂದು ಚಾಸಾ-8 ಮತ್ತು 9 ರವರ ಹೇಳಿಕೆಗಳನ್ನು ನಿಪಿ-11 ಮತ್ತು 13 ರಂತೆ ಪಡೆದುಕೊಂಡಿರುತ್ತೇನೆ.

( ಮಾನ್ಯ ಎ ಪಿಪಿ ರವರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿರುತ್ತಾರೆ. ನೀಡಲಾಯಿತು.)

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ